ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆ

ಕರ್ನಾಟಕ ವಿಧಾನ ಪರಿಷತ್ತು

ನೂರ ನಲವತ್ತೊಂದನೆಯ ಅಧಿವೇಶನ

ಗುರುವಾರ, ದಿನಾಂಕ : 24 ನೇ ಸೆಪ್ಟೆಂಬರ್, 2020

2011ನೇ ಸಾಲಿನ ಜನಗಣತಿಯ ಮಾಹಿತಿಯಲ್ಲಿನ ಲೋಪದ ಬಗ್ಗೆ

ಶ್ರೀ ಮೋಹನ್ ಕುಮಾರ್ ಕೊಂಡಜ್ಜಿ(ನಾಮನಿರ್ದೇಶನ ಹೊಂದಿದವರು) –

490 (613) ಮಾನ್ಯ ಮುಖ್ಯಮಂತ್ರಿಯವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಪ್ರತಿ 10 ವರ್ಷಕ್ಕೊಮ್ಮೆ ನಡೆಸುವ ಜನಗಣತಿಯ ಸಾಂಖ್ಯಿಕ ಮಾಹಿತಿಯನ್ನು ಯಾವ ಯಾವ ಆಧಾರದ ಮೇಲೆ ಸಂಗ್ರಹಿಸಲಾಗುತ್ತದೆ; ಹೀಗೆ ಸಂಗ್ರಹಿಸಿದ ಮಾಹಿತಿಯನ್ನು ಯಾವ ಯಾವ ಉದ್ದೇಶಗಳಿಗೆ ಬಳಸಲಾಗುತ್ತದೆ; (ವಿವರವಾದ ಮಾಹಿತಿಯನ್ನು ಒದಗಿಸುವುದು)

(ಆ) ರಾಜ್ಯದಲ್ಲಿ 2011ರ ಜನಗಣತಿಯಲ್ಲಿ ಹಿಂದಿನ 2001ರ ಜನ ಗಣತಿಗಿಂತ ಕಡಿಮೆ ಜನಸಂಖ್ಯೆ ದಾಖಲಾದ ಗ್ರಾಮಗಳ ಸಂಖ್ಯೆ ಎಷ್ಟು; (ತಾಲ್ಲೂಕುವಾರು ಮಾಹಿತಿಯನ್ನು ನೀಡುವುದು)

(ಇ) ಉಡುಪಿ ಜಿಲ್ಲೆಯಲ್ಲಿ 2011ರ ಜನಗಣತಿಯ ಪ್ರಕಾರ ದಾಖಲಾದ ಜನಸಂಖ್ಯೆ ಎಷ್ಟು; (ಗ್ರಾಮವಾರು, ಬ್ಲಾಕ್ವಾರು, ಗಣತಿದಾರರ ಪಟ್ಟಿವಾರು ಮಾಹಿತಿಯನ್ನು ನೀಡುವುದು)

(ಈ) ಅವುಗಳಲ್ಲಿ 2011ರ ಜನಗಣತಿಯಲ್ಲಿ ಹಿಂದಿನ 2001ರ ಜನಗಣತಿಗಿಂತ ಕಡಿಮೆ ಜನಸಂಖ್ಯೆ ದಾಖಲಾದ ಉಡುಪಿ ಜಿಲ್ಲೆಯ ಗ್ರಾಮಗಳ ಸಂಖ್ಯೆ ಎಷ್ಟು ಮತ್ತು ಅವು ಯಾವುವು; (ತಾಲ್ಲೂಕುವಾರು ಗ್ರಾಮವಾರು ಮಾಹಿತಿ ನೀಡುವುದು)

(ಉ) ಈ ರೀತಿ ಗ್ರಾಮದಲ್ಲಿ ಕಡಿಮೆ ಜನಸಂಖ್ಯೆ ದಾಖಲಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಇದಕ್ಕೆ ಕಾರಣವನ್ನು ಕಂಡು ಹಿಡಿಯಲು ಸರ್ಕಾರದಿಂದ ಕ್ರಮವಹಿಸಲಾಗಿದೆಯೇ; ಕೆಲವು ತಾಲ್ಲೂಕು ಮಟ್ಟದ ಅಧಿಕಾರಿಗಳು ಮೂಲಗಣತಿದಾರರು ನೀಡಿದ ಜನಸಂಖ್ಯಾ ಮಾಹಿತಿಯನ್ನು ತಿರುಚಿ ಸಾಂಖ್ಯಿಕ ಮಾಹಿತಿಯನ್ನು ಸರ್ಕಾರಕ್ಕೆ ಸಲ್ಲಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಇಲ್ಲವಾದಲ್ಲಿ ಪರಿಶೀಲನೆ ನಡೆಸಲಾಗುವುದೇ; ದುರುದ್ದೇಶ ಪೂರ್ವಕವಾಗಿ ತಪ್ಪು ಮಾಹಿತಿ ನೀಡಿದ ಅಧಿಕಾರಿಗಳ ವಿರುದ್ಧ ಕ್ರಮವಹಿಸಲಾಗಿದೆಯೇ?